ಮಾಹಿತಿ ಸಿಂಧು ಯೋಜನೆ

170 (208) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಹಿತಿ ಸಿಂದು ಯೋಜನೆಯಡಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನ ಎಷ್ಟು ಸರ್ಕಾರಿ ಪ್ರೌಢಶಾಲೆಗಳಿಗೆ ಗಣಕಯಂತ್ರಗಳನ್ನು ಒದಗಿಸಲಾಗಿದೆ (ಆ ಶಾಲೆಗಳ ಹೆಸರು, ವಿವರ ನೀಡುವುದು)

ಆ) ಇನ್ನೂ ಈ ತಾಲ್ಲೂಕಿನ ಎಷ್ಟು ಶಾಲೆಗಳಿಗೆ ಈ ಯೋಜನೆಯಡಿ ಗಣಕ ಯಂತ್ರಗಳನ್ನು ಒದಗಿಸಲು ಉದ್ದೇಶಿಸಲಾಗಿದೆ (ವಿವರ ನೀಡುವುದು)

ಇ) ಈ ತಾಲ್ಲೂಕಿನ ಎಷ್ಟು ಪ್ರೌಢಶಾಲೆಗಳಲ್ಲಿ ಮುಖ್ಯೋಪಾಧ್ಯಾಯರ ಹುದ್ದೆಗಳು ಖಾಲಿ ಇವೆ ಇವುಗಳ ಭರ್ತಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನ ಕೆಳಕಂಡ ಶಾಲೆಗಳಲ್ಲಿ ಮಾಹಿತಿ ಸಿಂಧೂ ಯೋಜನೆಯಡಿ ಕಂಪ್ಯೂಟರ್ ಶಿಕ್ಷಣ ಜಾರಿಗೊಳಿಸಲಾಗಿದೆ

1) ಮೊರಾರ್ಜಿ ವಸತಿ ಸರ್ಕಾರಿ ಪ್ರೌಢಶಾಲೆ ಮಚಿನ, ಬೆಳ್ತಂಗಡಿ ಹೋಬಳಿ
2) ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಳ್ತಂಗಡಿ
3) ಸರ್ಕಾರಿ ಪ್ರೌಢ ಶಾಲೆ, ಗೇರುಕಟ್ಟೆ
4) ಸರ್ಕಾರಿ ಪ್ರೌಢ ಶಾಲೆ, ಕೋಕಡ
5) ಸರ್ಕಾರಿ ಪ್ರೌಢ ಶಾಲೆ, ಪಡಂಗಡಿ

ಆ) ಮಾಹಿತಿ ಸಿಂಧು ಯೋಜನೆಯ 2ನೇ ಹಂತ ಅನುಷ್ಠಾನ ಸಮಯದಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ರಾಜ್ಯದ ಎಲ್ಲಾ ಪ್ರೌಢಶಾಲೆಗಳಿಗೂ ವಿಸ್ತರಿಸಲು ಯೋಜಿಸಲಾಗಿದ್ದು, ಈ ಸಂದರ್ಭದಲ್ಲಿ ಬೆಳ್ತಂಗಡಿ ತಾಲ್ಲೂಕಿನ ಯೋಜನೆ ಮೊದಲನೇ ಹಂತದಲ್ಲಿರುವ ಶಾಲೆಗಳನ್ನು ಹೊರತುಪಡಿಸಿ ಉಳಿದೆಲ್ಲಾ 17 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗುವುದು ಈ ಯೋಜನೆ ಅನುಷ್ಠಾನ ಕುರಿತ ವಿಚಾರ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಬೆಳ್ತಂಗಡಿ ತಾಲ್ಲೂಕಿನ 11 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇರುತ್ತವೆ ಇವುಗಳ ಭರ್ತಿಗೆ ಹಾಲಿ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಶೀಘ್ರ ಕ್ರಮ ಕೈಗೊಳ್ಳಲಾಗುತ್ತಿದೆ

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ

171 (209) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಈವರೆಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು ಬಿಡುಗಡೆ ಮಾಡಲಾಗಿರುವ ಈ ಅನುದಾನದಲ್ಲಿ ಎಸ್ಟು ಮೊತ್ತವನ್ನು ಈ ಯೋಜನೆಗೆ ವ್ಯಯಿಸಲಾಗಿದೆ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಬಾಕಿ ಉಳಿದಿರುವ ಕಾಮಗಾರಿಗಳೆಷ್ಟು ಕೇಂದ್ರ ಸರ್ಕಾರದಿಂದ ಇನ್ನೂ ಬಿಡುಗಡೆಗೆ [illegible] ಉಳಿದಿದೆ [illegible]

ಆ) ಗ್ರಾಮ ಸಡಕ್ ಯೋಜನೆಯಡಿ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಈವರೆಗೆ ಒಟ್ಟು ಎಷ್ಟು ಹಂತಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೇ ಈ ಬಗ್ಗೆ ಎಷ್ಟು ಅನುದಾನ ಬಿಡುಗಡೆಯಾಗಿರುತ್ತದೆ.

ಇ) ಈ ಯೋಜನೆಯಡಿಯಲ್ಲಿ ಈವರೆಗೆ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಪ್ರತಿ ಕಾಮಗಾರಿಗೆ ಒದಗಿಸಲಾದ ಅನುದಾನವೆಷ್ಟು

ಈ) ಈ ಯೋಜನೆಯಡಿಯಲ್ಲಿ ಸರ್ಕಾರದ ಮುಂದೆ ಇನ್ನೂ ಎಷ್ಟು ಕಾಮಗಾರಿಗಳು ಬಾಕಿ ಉಳಿದಿವೆ. ಬಾಕಿ ಉಳಿದಿರುವ ಕಾಮಗಾರಿಗಳನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು (ಈ ಬಗ್ಗೆ ವಿವರಗಳನ್ನು ಒದಗಿಸುವುದು) ?

ಶ್ರೀ ಎಂ ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಈವರೆಗೆ 365 68 ಕೋಟಿ ರೂ ಗಳನ್ನು ಬಿಡುಗಡೆ ಮಾಡಿದೆ ಬಿಡುಗಡೆ ಮಾಡಿರುವ ಈ ಅನುದಾನದಲ್ಲಿ 262 91 ಕೋಟಿ ರೂ ಗಳನ್ನು ನವೆಂಬರ್–2003ರ ಅಂತ್ಯದವರೆಗೆ ಖರ್ಚು ಮಾಡಲಾಗಿದೆ 799 ಕಾಮಗಾರಿಗಳು ಪೂರ್ಣಗೊಂಡಿವೆ 869 ಕಾಮಗಾರಿಗಳು ಬಾಕಿ ಉಳಿದಿವೆ ಕೇಂದ್ರ ಸರ್ಕಾರದಿಂದ ಇನ್ನೂ 76 48 ಕೋಟಿ ರೂ ಹಣ ಬಾಕಿ ಬರಬೇಕಾಗಿದೆ

ಆ) ಗ್ರಾಮ ಸಡಕ್ ಯೋಜನೆಯಡಿ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಈವರೆಗೆ ಮೊದಲನೇ ಹಂತದ 4 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಎರಡನೇ ಹಂತದ 8 ಕಾಮಗಾರಿಗಳ ಪೈಕಿ 6 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ಉಳಿದ 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಒಟ್ಟು ರೂ 161.58 ಲಕ್ಷ ಬಿಡುಗಡೆಯಾಗಿರುತ್ತದೆ

ಇ) ಈ ಯೋನಜನೆಯಡಿಯಲ್ಲಿ ಈವರೆವಿಗೆ 12 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಪ್ರತಿ ಕಾಮಗಾರಿಗಳಿಗೆ ಒದಗಿಸಲಾದ ಅನುದಾನದ ವಿವರಗಳನ್ನು ಅನುಬಂಧ – 1ರಲ್ಲಿ ನೀಡಲಾಗಿದೆ

ಈ) ಎರಡು ಕಾಮಗಾರಿಗಳು ಬಾಕಿ ಉಳಿದಿವೆ, ಅವುಗಳೆಂದರೆ

1) ಆರಂಭಾಡಿ –ಹನ್ನೆರಡು ಕಾವಲು ರಸ್ತೆ ಅಭಿವೃದ್ಧಿ –52–70 ಲಕ್ಷ ರೂ.ಗಳು

2) ತಣ್ಣೀರು ಪಂತ–ಅಳಿಕೆ – ಹೆರಾಲ–ಲಿಂಗಸ್ಥಳ ರಸ್ತೆ ಅಭಿವೃದ್ಧಿ–48 66 ಲಕ್ಷ

ಈ ಎರಡು ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು ನವೆಂಬರ್–2004ರಲ್ಲಿ ಅನುಷ್ಠಾನಗೊಳಿಸಲಾಗುವುದು

ಅನುಬಂಧ –1

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	2	3
1	ಸವನಾಲು ಕೆರಂಬಾರು ರಸ್ತೆ ಅಭಿವೃದ್ಧಿ	11 20
2	ಉರುವಾಲು – ಕಾವರಪಾಡಿ ಮುರ ರಸ್ತೆ ಅಭಿವೃದ್ಧಿ	11 65
3	ಕಲಂಜ–ಅರೆಸಿಕ ಮಕ್ಕಿ ರಸ್ತೆ ಅಭಿವೃದ್ಧಿ	14 68
4	ಗರಡಾಡಿ–ಕಳಂಜ ರಸ್ತೆ ಅಭಿವೃದ್ಧಿ	13 78

1	2	3
5	ಪುಂಜಾಲುಕಟ್ಟ ಪುರಿಯಾ ರಸ್ತೆ ಅಭಿವೃದ್ಧಿ	13 93
6	ಹೆಂಜಿರ–ಹತ್ಯಡ್ಕ ರಸ್ತೆ ಅಭಿವೃದ್ಧಿ	13 65
7	ಪೆರಿಯಶಾಂತಿ ಕೊಕ್ಕಡ ಹುಲಿಯ ಧರ್ಮಸ್ಥಳ ರಸ್ತೆ ಅಭಿವೃದ್ಧಿ	13 56
8	ಉಜಿರೆ–ಸೂರ್ಯ–ನಡ ರಸ್ತೆ ಅಭಿವೃದ್ಧಿ	13 60
9	ಮಡ್ಡಡಕ ಮಚಿನ ರಸ್ತೆ ಅಭಿವೃದ್ಧಿ	13 64
10	ಮೂಡಿಗೆರೆ ಶಿತಿಲ ರಸ್ತೆ ಅಭಿವೃದ್ದಿ	14 12
11	ಹನಿಯೂರು – ಕೊಟ್ಟಿಗೆಹಾರ ರಸ್ತೆ ಅಭಿವೃದ್ಧಿ	14 25
12	ಧರ್ಮಸ್ಥಳ ಬೆಳಾಲ ರಸ್ತೆ ಅಭಿವೃದ್ಧಿ	13 52
	ಒಟ್ಟು	**161 58**

ಔಷಧ ನಿಯಂತ್ರಣ ಇಲಾಖೆಯ ಅವ್ಯವಹಾರ

173 (211) ಶ್ರೀ ರವೀಂದ್ರನಾಥ್ ಎಸ್ ಎ (ಮಾಯಕೊಂಡ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔಷಧ ನಿಯಂತ್ರಣ ಇಲಾಖೆಯಲ್ಲಿ ಪತ್ತೆಯಾಗಿದ್ದ ಅವ್ಯವಹಾರ ಪ್ರಕರಣವು ಯಾವ ಹಂತದಲ್ಲಿದೆ

ಆ) ಲೋಕಾಯುಕ್ತದವರು ಶಿಫಾರಸ್ಸು ಮಾಡಿದ ಅಂಶಗಳೇನು

ಇ) ಯಾರು ಯಾರು ತಪ್ಪಿತಸ್ಥರೆಂದು ಗುರುತಿಸಲಾಗಿದೆ ಇವರುಗಳಿಗೆ ಯಾವ ಶಿಕ್ಷೆ ವಿಧಿಸಲಾಗಿದೆ.

ಈ) ಲೋಕಾಯುಕ್ತರ ಶಿಫಾರಸ್ಸಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಈ ಹಗರಣದಲ್ಲಿ ಭಾಗಿಯಾದ ಇತರ ಅಧಿಕಾರಿ ಮತ್ತು ರಾಜಕೀಯ ನೇತಾರರುಗಳು ಯಾರು ವಿಚಾರಣಾ ವರದಿಯ ವಿವರಗಳನ್ನು ಒದಗಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ಅವ್ಯವಹಾರದ ಬಗ್ಗೆ ಕೂಲಂಕುಷ ಇಲಾಖಾ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ನೀಡಲು ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಿ ಸರ್ಕಾರದ ಆದೇಶ ಸಂಖ್ಯೆ ಆಕುಕ 279 ಎಂಎಸ್‌ಎ 2003 ದಿನಾಂಕ 13 10 2003ರಂದು ಆದೇಶಿಸಿದೆ ವರದಿ ನಿರೀಕ್ಷಿಸಲಾಗಿದೆ

ಆ) ಸನ್ಮಾನ್ಯ ಲೋಕಾಯುಕ್ತರು ತಮ್ಮ ತನಿಖಾ ವರದಿಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ತಮ್ಮ ಕರ್ತವ್ಯಲೋಪದಿಂದಾಗಿ ಕೆಳಮಟ್ಟದ ಕಲಬೆರಕೆಯ Spurious ಮತ್ತು misbranded ಔಷಧಗಳನ್ನು ತಯಾರಕ ರೊಂದಿಗೆ ಶಾಮೀಲಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ಕಾರಣಕರ್ತರಾಗಿದ್ದು ಔಷಧ ನಿಯಂತ್ರಣ ಕಾಯಿದೆ ಮತ್ತು ಔಷಧ ನಿಯಂತ್ರಣ ನಿಯಮಗಳನ್ವಯ ಕಾರ್ಯ ನಿರ್ವಹಿಸದೇ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಇವರುಗಳನ್ನು ತಕ್ಷಣ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವುದರೊಂದಿಗೆ, ಈ ಅವ್ಯವಹಾರದ ಬಗ್ಗೆ ಕೂಲಂಕಷವಾಗಿ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಲೋಕಾಯುಕ್ತ ವಿಚಾರಣೆಗೊಳಪಡಿಸಲು ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿರುವರು